ಮಗ ಉತ್ತರ ಹೇಳಿದ.

"ಅಮ್ಮಾ, ನೀನು ನನ್ನನ್ನು ರಕ್ಷಿಸಿದ್ದು ನಿಜ, ಅದಕ್ಕೆ ಮರುಮಾತಿಲ್ಲ. ಇವರಿಬ್ಬರಿಗೂ ನನ್ನನ್ನು ನೋಡಿ, ನಾನು ಬದುಕಿರುವುದನ್ನು ನೋಡಿ ಅಪಾರ ಆನಂದವಾಗಿದೆ. ಅವರು ಕೂಡ ಮತ್ತಾರದೋ ಮೋಸಕ್ಕೆ ಗುರಿಯಾದರು, ಯಾರು ಮಾಡಿದ್ದು ಈ ಕೆಲಸ ಎಂಬುದನ್ನು ನೋಡಬೇಕಾಗಿದೆ. ಅಮ್ಮಾ, ಅವರ ಕಣ್ಣುಗಳಲ್ಲಿ ಪ್ರೀತಿಯ ನೋಟ ಕಾಣುವುದಿಲ್ಲವೇ? ಸರಿಯಾಗಿ ನೋಡು. ಅವರ ತುಟಿಯಿಂದ ಹೊರಡುತ್ತಿರುವ ಸವಿಮಾತುಗಳು ಅವರು ಸತ್ಯವಂತರು ಎಂಬುದನ್ನು ತೋರಿಸುವುದಿಲ್ಲವೇ? ನಾವು ಹಿಂದಿನಂತೆ ಮುಂದೆಯೂ ಒಟ್ಟಾಗಿ ಪ್ರೀತಿಯಿಂದ ವಾಸಿಸುತ್ತೇವೆ. ನನ್ನಲ್ಲಿ ಭರವಸೆ ಇರಲಿ, ಅಮ್ಮಾ."

ಹೀಗೆ ಮಾತನಾಡುತ್ತಾ ಗೂನುರ್ ತನ್ನ ಹೆಂಡಿರು ತನ್ನನ್ನು ನಂಬುವಂತೆ ಮಾಡಿದ. ಆದರೆ ಅವನ ಮನಸ್ಸಿನಲ್ಲಿ ಇದ್ದದ್ದೇ ಬೇರೆ – ತನ್ನ ಹೆಂಡಿರ ಮೇಲೆ ಸೇಡು ತೀರಿಸಿಕೊಳ್ಳಬೇಕು. ಮೂವರೂ ತಾಯಿಯ ಜೊತೆಯೇ ವಾಸಿಸುತ್ತಿದ್ದಂತೆ ಅವನು ಸಂಚು ಒಂದನ್ನು ರೂಪಿಸಿದ...

ಗೂಡಿನ ಹತ್ತಿರವೇ ಇದ್ದ ತೊರೆಯೊಂದನ್ನು ಆಯ್ಕೆ ಮಾಡಿದ. ಅದರಲ್ಲಿ ತಾನೇ ಚೂಪಾಗಿಸಿದ ಎರಡು ಕೋಲುಗಳನ್ನು ನೆಟ್ಟ. ಮೇಲಿನಿಂದ ನೋಡುವವರಿಗೆ ಇವು ಕಾಣುತ್ತಿರಲಿಲ್ಲ. ಹತ್ತಿರದ ದಡದಲ್ಲಿ ಎರಡು ಮರದ ದಿಮ್ಮಿಗಳನ್ನು ಮಲಗಿಸಿದ. ತನ್ನ ಹೆಂಡಿರ ಬಳಿ ಹೋಗಿ ಹೇಳಿದ,

"ಒಂದು ರಮ್ಯವಾದ ಸ್ನಾನದ ಸ್ಥಳವನ್ನು ಪತ್ತೆ ಮಾಡಿದ್ದೀನಿ. ಇಬ್ಬರೂ ಬನ್ನಿ. ಎಲ್ಲರೂ ಸ್ನಾನ ಮಾಡೋಣ."

ಹೆಂಡಿರು ಸಂಭ್ರಮದಿಂದ ಜೊತೆಗೆ ಬಂದರು. ಸ್ನಾನದ ಸ್ಥಳಕ್ಕೆ ಅವರನ್ನು ಕರೆತಂದು ಅವರಿಗೆ ಸೂಚನೆಗಳನ್ನು ನೀಡಿದ.

"ಇಲ್ಲಿ ಎರಡು ದಿಮ್ಮಿಗಳಿವೆ. ಒಬ್ಬೊಬ್ಬರು ಒಂದು ದಿಮ್ಮಿಯ ಮೇಲೆ ನಿಲ್ಲಿ. ನಂತರ ಅಲ್ಲಿಂದ ನೀರಿಗೆ ನೆಗೆಯಿರಿ. ಯಾರು ಹೆಚ್ಚು ದೂರ ನೆಗೆಯುತ್ತೀರೋ ನೋಡೋಣ. ನಾನು ಮೊದಲೇ ನೀರಿನಲ್ಲಿದ್ದು ನೋಡುತ್ತಿರುತ್ತೇನೆ."

ಹೀಗೆ ಹೇಳಿದವನೇ ತಾನು ಒಂದು ದಿಮ್ಮಿಯಿಂದ ನೆಗೆದ. ಇವನು ಸಾಕಷ್ಟು ದೂರ ಜಿಗಿದಿದ್ದ, ಒಳಗಿನ ಚೂಪು ಕಡ್ಡಿಗಳಿಗಿಂತ ಬಲುದೂರ.

"ಈಗ ನೀವು ನೆಗೆಯಿರಿ" ಎಂದು ಹೆಂಡರಿಗೆ ಆಣತಿ ಇತ್ತ. ಗೂನುರನಿಗೆ ಅವನ ಹೆಂಡಿರು ಎಷ್ಟು ದೂರ ಜಗಿಯಬಲ್ಲರು ಎಂಬುದು ಗೊತ್ತಿತ್ತು. ಆ ದೂರಕ್ಕೆ ಸರಿಯಾಗಿ ಕೋಲುಗಳನ್ನು ನೆಟ್ಟಿದ್ದ. ಇಬ್ಬರೂ ನೆಗೆದಾಗ ಚೂಪು ಕೋಲುಗಳಿಗೆ ಸಿಕ್ಕಿ ತತ್ತರಿಸಿದರು. ಬಿಡಿಸಿಕೊಂಡು ಬರುವುದು ಆಗದ ಮಾತು.

"ಸತ್ತರು ಇಬ್ಬರೂ. ಇನ್ನು ಅವರಿಂದ ನನಗೆ ತೊಂದರೆ ಇಲ್ಲ" ಎಂದು ಕೇಕೆ ಹಾಕಿ ಗೂನುರ್ ಗೂಡಿಗೆ ಹಿಂತಿರುಗಿದ. ಕಾದಿದ್ದ ತಾಯಿ ಕೇಳಿದಳು:

"ಎಲ್ಲಿ ಅವರಿಬ್ಬರು?"

"ಜೇನಿನ ಬೇಟೆಗೆ ಹೋಗಿದ್ದಾರೆ. ಇನ್ನೇನು ಬರುತ್ತಾರೆ."

ಕೆಲವು ದಿನಗಳಾದರೂ ಅವರು ಬರಲಿಲ್ಲ. ಅವಳಿಗೆ ಮಗನ ಮೇಲೆ ಸಂಶಯ ಬಂತು. ನಿಜದಲ್ಲಿ ಅವಳು ಮಗ, ಸೊಸೆ ಯಾರನ್ನೂ ನಂಬುತ್ತಿರಲಿಲ್ಲ. ಇನ್ನು ಮಗನನ್ನು ಕೇಳಲೂ ಇಲ್ಲ, ಒಂದು ದಿನ, ಸೊಸೆಯರ ಹೆಜ್ಜೆಯನ್ನು ಅನುಸರಿಸಿ ನಡೆದಳು. ದಾರಿ ಅವಳನ್ನು ಆ ತೊರೆಯ ಬಳಿ ಕರೆತಂದಿತು. ಅಲ್ಲಿಂದ ಅವರು ಹೊರ ಹೋದ ಗುರುತು ಇರಲಿಲ್ಲ. ನೀರಿನಲ್ಲಿ ತಡಕಾಡಿದಳು. ಸೊಸೆಯರ ದೇಹಗಳು ಕೋಲುಗಳಿಗೆ ಸಿಕ್ಕಿಕೊಂಡಿದ್ದವು. ನಾಜೂಕಾಗಿ ಅವುಗಳನ್ನು ಎತ್ತಿ ದಡಕ್ಕೆ ತಂದಳು. ಅವಳಿಗೆ ಮೊದಲು ಬಂದದ್ದು ಎಲ್ಲಿಲ್ಲದ ಕೋಪ, ಅವಳ ಮಗನ ಮೇಲೆ.